

# ಜುಟ್ಟಕ್ಕಿ ಬರುತ್ತೈತಿ ಗದ್ದೆ ಬಯಲಿಗೆ...

■ ಹ.ಸ. ಬ್ಯಾಕೋಡ

**ಗುಬ್ಬಿಗಿಂತಲೂ ತುಸು ದೊಡ್ಡದಾದ ಜುಟ್ಟಕ್ಕಿಗೆ 'ನೆಲಗುಬ್ಬಿ' ಎನ್ನುವ ಹೆಸರಿದೆ. ಆಕಾಶಕ್ಕಿಂತಲೂ ಹೆಚ್ಚು ನೆಲವನ್ನೇ ಅವಲಂಬಿಸಿರುವುದರಿಂದ ಈ ಹೆಸರು.**

ಗುಬ್ಬಿಗಿಂತ ದೊಡ್ಡದಾಗಿರುವ ಜುಟ್ಟಕ್ಕಿ, ಮಲೆನಾಡು, ಮಡಿಕೇರಿ ಪ್ರದೇಶದಲ್ಲಿ ಬೇಸಿಗೆಯಲ್ಲಿ ಕಂಡುಬರುವ ಅಪರೂಪದ ಹಕ್ಕಿ. ಬೆಂಗಳೂರು ಹೊರವಲಯದ ಬೆಳ್ಳಿಕೆರೆಯಲ್ಲಿ ಈ ಜುಟ್ಟಕ್ಕಿ ಇತ್ತೀಚೆಗೆ ಕಾಣಿಸಿದ್ದು ಬೆಳ್ಳಿಚುಕ್ಕಿಯಂತೆಯೇ ಕಾಣಿಸಿತು.

ಇಂಗ್ಲಿಷ್‌ನಲ್ಲಿ 'ಕ್ರಿಸ್ಟೆಡ್ ಲಾರ್ಕ್' ಎನ್ನಲಾಗುವ ಈ ಹಕ್ಕಿಯನ್ನು ಕನ್ನಡದಲ್ಲಿ ಜುಟ್ಟಕ್ಕಿ ಎಂದು ಗ್ರಾಮೀಣ ಪ್ರದೇಶದಲ್ಲಿ ಕರೆಯಲಾಗುತ್ತದೆ. ಗದ್ದೆ ಕೊಯ್ಲಾದ ಬಳಿಕ ಅಲ್ಲಲ್ಲಿ ಬಿದ್ದ ಭತ್ತವನ್ನು ಆಯ್ದುಕೊಂಡು ತಿನ್ನುತ್ತ ತಿರುಗುವ ಈ ಜುಟ್ಟಕ್ಕಿಯನ್ನು 'ನೆಲಗುಬ್ಬಿ' ಎಂದೂ ಕರೆಯಲಾಗುತ್ತದೆ. ಹೆಚ್ಚು ಹೊತ್ತು ಆಕಾಶದಲ್ಲಿ ಹಾರಾಡದ ಈ ಹಕ್ಕಿ ಸಾಮಾನ್ಯವಾಗಿ ನೆಲದಲ್ಲಿಯೇ ಓಡಾಡಿಕೊಂಡು ಇರುತ್ತದೆ. ಆ ಕಾರಣದಿಂದಾಗಿಯೇ ಇದಕ್ಕೆ 'ನೆಲಗುಬ್ಬಿ' ಎನ್ನುವ ಹೆಸರು.

ಬಯಲು ಪ್ರದೇಶದಲ್ಲಿನ ಹುತ್ತಗಳ ಸುತ್ತಲೂ ಹೆಚ್ಚಾಗಿ ಓಡಾಡಿಕೊಂಡಿರುವ ಜುಟ್ಟಕ್ಕಿಗೆ ಗೆದ್ದಲು ಹುಳುಗಳೆಂದರೆ ತುಂಬಾನೆ ಇಷ್ಟ.

ವಿಶ್ವದಲ್ಲಿ ಒಟ್ಟು 33 ಉಪಜಾತಿಯ ಜುಟ್ಟಕ್ಕಿಗಳು ಇವೆ ಎನ್ನಲಾಗಿದೆ. ಬೇಸಿಗೆ ಸಮಯದಲ್ಲಿ ಭಾರತದಲ್ಲಿನ ಬೇರೆ ಬೇರೆ ರಾಜ್ಯಗಳಲ್ಲಿ ಕಾಣಸಿಗುವ ಈ ಹಕ್ಕಿಗಳು ನೆರೆ ರಾಷ್ಟ್ರ ಚೀನಾ, ಬಾಂಗ್ಲಾದೇಶ, ನೇಪಾಳ, ಉತ್ತರ ಆಫ್ರಿಕಾದಲ್ಲೂ ಇವೆ. ಸ್ಕ್ಯಾಂಡಿನೇವಿಯಾ ದೇಶದಲ್ಲಿ ಈ ಜುಟ್ಟಕ್ಕಿಗೆ ಅಪರೂಪದ ಪಕ್ಷಿಯೆನ್ನುವ ಖ್ಯಾತಿ. ನಮ್ಮ ದೇಶದಲ್ಲಿರುವ ಜುಟ್ಟಕ್ಕಿ ಜಾತಿಗೆ ಸೇರಿದ ಯುರೇಷಿಯನ್ ಸ್ಕೈಲಾರ್ಕ್ ಎನ್ನುವ ಜುಟ್ಟಕ್ಕಿ ಆಕಾಶದಲ್ಲಿ ಎತ್ತರದಲ್ಲಿ ಹಾರಾಡುತ್ತದೆ. ಹಾರಾಡುವಾಗ ಇಂಪಾಗಿ ಕೂಗುತ್ತದೆ.

ಕಂದು ಬಣ್ಣದ, ಜುಟ್ಟು ಹೊಂದಿರುವ ಈ ಹಕ್ಕಿಗಳು ಕೇಳಲು ಹಿತವಾಗುವ ಹಾಗೆ ಕೂಗುತ್ತವೆ. ಸಂತಾನೋತ್ಪತ್ತಿ ಸಮಯದಲ್ಲಿ ಹೆಚ್ಚಾಗಿ ಕೂಗುತ್ತವೆ. ಮೊಟ್ಟೆ ಇಟ್ಟು ಮರಿ ಮಾಡಿದಾಗ ಮರಿಗಳಿಗೆ ಆರಂಭದಲ್ಲಿ ಹುಳಗಳನ್ನೇ ಗುಟುಕಾಗಿ ನೀಡುತ್ತವೆ. ಮರಿಗಳು ದೊಡ್ಡದಾಗುತ್ತಿದ್ದಂತೆ ಸಣ್ಣ ಸಣ್ಣ ಕಾಳುಗಳನ್ನು ತಂದು ತಿನಿಸುತ್ತವೆ.

ಸಾಮಾನ್ಯ ಗುಬ್ಬಿಗಳಂತೆ ಜುಟ್ಟಕ್ಕಿಗಳೂ ಮನುಷ್ಯರ ಹತ್ತಿರ ಸುಳಿಯಲು ಇಷ್ಟಪಡುವುದಿಲ್ಲ. ಗದ್ದೆಯಂತಹ ಬಯಲು ಪ್ರದೇಶದಲ್ಲಿ ಜನಗಳನ್ನು ಕಂಡಾಗ ಜುಟ್ಟಕ್ಕಿಗಳು ಸಣ್ಣ ಸಣ್ಣ ಗಿಡಗಳ ಬುಡದಲ್ಲಿ ಮತ್ತು ಎತ್ತರದ ಹುಲ್ಲಿನ ನಡುವೆ ಅವಿತುಕೊಳ್ಳುತ್ತವೆ. ■

